

ಕನ್ನಡ ಕಾವ್ಯಪರಂಪರೆಯ ಅಪೂರ್ವ ರತ್ನಗಳಲ್ಲೊಂದು ‘ಗೋವಿನಹಾಡು’. ಆ ಕವಿತೆಯಲ್ಲಿನ ಅರ್ಬುದ ಹೆಸರಿನ ಹುಲಿಯನ್ನೇ ಕ್ಯಾನ್ಸರ್ ಎಂದು ಭಾವಿಸಿದರೆ, ಈಗ ಆ ವ್ಯಾಘ್ರ ಮೊದಲಿನಷ್ಟು ಭಯ ಹುಟ್ಟಿಸುತ್ತಿಲ್ಲ. ಏಕೆಂದರೆ, ‘ಪುಣ್ಯಕೋಟಿ’ ರೂಪದ ಉತ್ತಮ ಚಿಕಿತ್ಸೆಯ ಆನ್ಸರ್ ಪ್ರಸ್ತುತ ಕ್ಯಾನ್ಸರ್‌ಗೆ ದೊರೆಯುತ್ತಿದೆ. ಕ್ಯಾನ್ಸರ್ ಎನ್ನುವುದೀಗ ಮರಣದಲ್ಲಿಯೇ ಕೊನೆಗೊಳ್ಳುವ ರೋಗವಾಗಿ ಉಳಿದಿಲ್ಲ. ಸಕಾಲದಲ್ಲಿ ಸರಿಯಾದ ಉಪಚಾರ ದೊರೆತರೆ ಕ್ಯಾನ್ಸರ್‌ನಿಂದ ಗುಣಹೊಂದುವುದು ಸಾಧ್ಯವಿದೆ. ಆ ಮಟ್ಟಿಗೆ ವೈದ್ಯ ವಿಜ್ಞಾನದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ನಡೆದಿವೆ. ಫೆಬ್ರುವರಿ 4 ‘ವಿಶ್ವ ಕ್ಯಾನ್ಸರ್ ದಿನ’. ಈ ಸಂದರ್ಭದಲ್ಲಿ ಕ್ಯಾನ್ಸರ್ ರೋಗದ ಬಗ್ಗೆ ಭೀತಿ ಕಳೆಯುವ, ಕ್ಯಾನ್ಸರ್ ಬಗೆಗೆ ಸಾಕಷ್ಟು ತಿಳಿವಳಿಕೆ ನೀಡುವ ಹಾಗೂ ತಜ್ಞ ವೈದ್ಯರುಗಳ ಸಂದರ್ಶನಗಳನ್ನೂ ಒಳಗೊಂಡಿರುವ ವಿಶೇಷ ಬರಹವನ್ನು ‘ಸುಧಾ’ ಓದುಗರ ಮುಂದಿಡುತ್ತಿದೆ.

**■ ಉಮಾ ಅನಂತ್**

# ಆತಂಕ ಬೇಡ, ಕ್ಯಾನ್ಸರ್‌ಗೂ ಇದೆ ಆನ್ಸರ್!

